Gramothan India Foundation

## Embroidery Training Program @ Badiadka Gramothan Seva Centre



17-10-2016
ಸೋಮವಾರ ಪುಟ-4

ಹೊಸ ದಿಗಂತ

# ಎಂಬ್ರೋಯಿಡರಿ ತರಬೇತಿ

ಪೆರಡಾಲ : ಬದಿಯಡ್ಕ ಶ್ರೀ ಭಾರತೀ ವಿದ್ಯಾಪೀಠದಲ್ಲಿ ಯು.ಪಿ. ವಿಭಾಗದ ವಿದ್ಯಾರ್ಥಿಗಳಿಗೆ ಎರಡು ದಿವಸದ ಎಂಬ್ರೋಯಿಡರಿ ಕಾರ್ಯಾಗಾರವನ್ನು ಇತ್ತೀಚೆಗೆ ಏರ್ಪಡಿಸಲಾಗಿತ್ತು.

ಬದಿಯಡ್ಕ ಗ್ರಾಮೋತ್ಥಾನ ಸೇವಾ ಕೇಂದ್ರದ ಆಶ್ರಯದಲ್ಲಿ ಜರಗಿದ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ವಿಜಯ ಹಿಳ್ಳೆಮನೆ, ಪವಿತ್ರಾ ಹಾಗೂ ಕುಮಾರಿ ಗೀತಾ ಭಾಗವಹಿಸಿದ್ದರು. ಕಾರ್ಯಕ್ರಮ ಸಂಯೋಜಕ ಧನಂಜಯ ಮಧೂರು ಮಾತನಾಡಿ, ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಇಂತಹ ಶಿಬಿರಗಳನ್ನು ಶಾಲೆಯ ಸಹಕಾರದೊಂದಿಗೆ ಆಯೋಜಿಸಲಾಗುವುದು ಎಂದರು. ಸಭಾಧ್ಯಕ್ಷತೆಯನ್ನು ಶಾಲಾ ಸಂಚಾಲಕ ಜಯಪ್ರಕಾಶ ಪಜಿಲ ವಹಿಸಿದ್ದರು.

ಹ್ಯಾಂಡ್ ಎಂಬ್ರೋಯಿಡರಿ, ಫ್ಯಾಬ್ರಿಕ್ ಪೈಂಟಿಂಗ್, ರನ್ನಿಂಗ್ ಸ್ಟಿಚ್, ಬ್ಯಾಕ್ ಸ್ಟಿಚ್, ಸ್ಟೆಮ್ ಸ್ಟಿಚ್ ಮೊದಲಾದ ಕೌಶಲ್ಯಯುಕ್ತ ತರಬೇತಿಯನ್ನು ನೀಡಲಾಯಿತು. ಮಕ್ಕಳು ತಮ್ಮ ಅನಿಸಿಕೆ ವ್ಯಕ್ತಪಡಿಸಿದರು. ಅಧ್ಯಾಪಿಕೆಯರಾದ ಭಾಗ್ಯಜ್ಯೋತಿ ಪಟ್ಟಾಜೆ, ರಾಜೇಶ್ವರಿ ಪೈಕ ಸಹಕರಿಸಿದರು.